**ಅಭ್ಯಾಸ ಪ್ರಶ್ನೆ ಪತ್ರಿಕೆ -2 ೧೦ ನೆಯ ತರಗತಿ ಪ್ರಥಮ ಭಾಷೆ ಕನ್ನಡ ಅಂಕಗಳು -೪೦**

**ಸೂಚನೆಗಳು : ಕೊಟ್ಟಿರುವ ಪ್ರಶ್ನೆಗಳು ಬಹು ಆಯ್ಕೆ ಮಾದರಿಯ ಪ್ರಶ್ನೆಗಳಾಗಿವೆ . ಪ್ರತಿ ಪ್ರಶ್ನೆಗೂ ಒಂದೊಂದು ಅಂಕ ನಿಗದಿ ಪಡಿಸಲಾಗಿದೆ . ಪ್ರತಿ ಪ್ರಶ್ನೆಗೆ ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ .**

**೧ .ಗಡಿ ಪ್ರದೇಶಗಳಲ್ಲಿ ಬ್ಲಾಕ್ ಔಟ್ ನಿಯಮವನ್ನು ಪಾಲಿಸುವುದು ಈ ಕಾರಣದಿಂದ**
**ಎ) ಯಾರೂ ಸಂಚರಿಸಬಾರದು ಬಿ) ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು ಸಿ)ಶತ್ರು ದೇಶವನ್ನು ಸುಲಭವಾಗಿ ಪ್ರವೇಶಿಸಬಹುದೆಂದು ಡಿ ) ಕತ್ತಲೆಯಲ್ಲಿ ಸುಲಭವಾಗಿ ಓಡಾಡಲು ಅನುಕೂಲವಾಗುವುದೆಂದು**

**೨.ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು**
**ಎ) ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ ,ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು**
**ಬಿ) ನಾನು ಯುದ್ಧ ಮಾಡುವ ಮೂರ್ಖರ ಕಡೆಯವನು ,ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನಲ್ಲ**
**ಸಿ) ನಾನು ಸಂಕಷ್ಟಕ್ಕೀಡಾದ ಶತ್ರು ದೇಶದ ಕಡೆಯವನು ,ಯುದ್ಧ ಮಾಡುವ ಜಾಣರ ಕಡೆಯವನು**
**ಡಿ) ನಾನು ಯುದ್ಧ ಮಾಡುವ ಬುದ್ಧಿವಂತರ ಕಡೆಯವನಲ್ಲ ,ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು**

**೩. ಶ್ರೀರಾಮನ ತಂದೆಯ ಹೆಸರು**
**ಎ) ಧೃತರಾಷ್ಟ್ರ ಬಿ)ವ್ಯಾಸ . ಸಿ)ದಶರಥ . ಡಿ ) ಮತಂಗ**

**೪ . ಮತಂಗ ಆಶ್ರಮದಲ್ಲಿ ವಾಸವಿದ್ದ ತಪಸ್ವಿನಿ —-**
**ಎ)ಸೀತೆ ಬಿ) ಶಬರಿ ಸಿ) ಅಹಲ್ಯೆ ಡಿ) ಅನಸೂಯ**

**೫ .ಡಿ. ಎಸ್ .ಜಯಪ್ಪಗೌಡರು ಜನಿಸಿದ ಜಿಲ್ಲೆ —-**
**ಎ) ತುಮಕೂರು ಬಿ)ಶಿವಮೊಗ್ಗ. ಸಿ) ಚಿಕ್ಕಮಗಳೂರು ಡಿ) ಮಂಡ್ಯ**

**೬.ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದೇವೆ ,ತಾವು ಈ ಮಾತಿಗೆ ಬಹುದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ ,ತಾವು ಕಡಿಮೆ ಮಾತನಾಡಿದ್ದೀರಿ ಹೆಚ್ಚು ಕೆಲಸ ಮಾಡಿದ್ದೀರಿ . ಅದನ್ನು ನಾವು ತಮ್ಮಿಂದ ಕಲಿಯೋಣ ಈ ಮಾತನ್ನು ನೆಹರೂರವರು ಹೇಳಿದ್ದು ಇವರ ಕುರಿತಾಗಿ —-**
**ಎ) ಮಹಾತ್ಮಾ ಗಾಂಧಿ. ಬಿ) ಸರ್. ಎಂ. ವಿಶ್ವೇಶ್ವರಯ್ಯ. ಸಿ) ನಾಲ್ವಡಿ ಕೃಷ್ಣರಾಜ ಒಡೆಯರು ಡಿ) ಸಿ . ರಂಗಾಚಾರ್ಲು**

**೭ . ಮನೆಮಂಚಮ್ಮನ ಕತೆ ಹೇಳಿದ ಕವಿ**
**ಎ)ಸಿದ್ಧಲಿಂಗಯ್ಯ . ಬಿ)ದೇವನೂರ ಮಹಾದೇವ ಸಿ) ಕುವೆಂಪು ಡಿ) ಜಿ. ಎಸ್ .ಶಿವರುದ್ರಪ್ಪ**

**೮.ಅಶೋಕ ಪೈಯವರು ಒಬ್ಬ**
**ಎ) ನಾಟಕಕಾರರು ಬಿ) ವಚನಕಾರರು. ಸಿ) ಮನೋವೈದ್ಯರು ಡಿ) ಶಿಕ್ಷಕರು**

**೯ .ವ್ಯಾಘ್ರಗೀತೆ ಗದ್ಯ ಭಾಗದ ಆಕರ ಕೃತಿ ——**
**ಎ) ಹಗಲುಗನಸುಗಳು ಬಿ) ಅಲೆಯುವ ಮನ ಸಿ) ಮಿನುಗುಮಿಂಚು ಡಿ) ಸಮಗ್ರ ಲಲಿತ ಪ್ರಬಂಧಗಳು**

**೧೦ . ಹುಲಿಯ ಪರಮಾನಂದಕ್ಕೆ ಕಾರಣ —**
**ಎ) ತನಗೆ ಎದುರಾಳಿಯೇ ಸಿಕ್ಕಿದನೆಂದು ಬಿ) ಶಾನುಭೋಗರು ದುಂಡು ದುಂಡಾಗಿರುವರೆಂದು ಸಿ)ನಿದ್ದೆಯಿಂದ ಎಚ್ಚರವಾಯಿತೆಂದು ಡಿ) ಬೆಳದಿಂಗಳ ರಾತ್ರಿ ವಿಧಿ ಆಹಾರಕ್ಕೆ ಏನಾದರೂ ಒದಗಿಸಿರಬಹುದೆಂದು**

**೧೧. ಧರ್ಮಾಧಿಕರಣರು ವಟವೃಕ್ಷದ ಸಮೀಪ ಬರಲು ಕಾರಣ**
**ಎ) ವೃಕ್ಷದ ಪೂಜೆ ಮಾಡಲು . ಬಿ)ವೃಕ್ಷವನ್ನು ಕಡಿಯಲು ಸಿ) ಸಾಕ್ಷಿ ಕೇಳಲು ಡಿ)ವೃಕ್ಷದ ನೆರಳಲ್ಲಿ ಕುಳಿತುಕೊಳ್ಳಲು**

**೧೨.ದುಷ್ಟಬುದ್ಧಿಯ ತಂದೆಯ ಹೆಸರು ——**
**ಎ)ಪ್ರೇಮಮತಿ ಬಿ) ಮೋಹಮತಿ ಸಿ)ಪಾಪಕರ್ಮ ಡಿ) ಧರ್ಮಬುದ್ಧಿ**

**೧೩. ನಾಳಿನ ಕನಸನ್ನು ಎಲ್ಲಿ ಬಿತ್ತಬೇಕು ?**
**ಎ) ಪ್ರೀತಿ ವಿಶ್ವಾಸ ತುಂಬಿದ ಕಣ್ಣುಗಳಲ್ಲಿ ಬಿ) ಭಯ ಸಂಶಯದೊಳು ಕಂದಿದ ಕಣ್ಣುಗಳಲ್ಲಿ ಸಿ) ಭಯ ಸಂಶಯದಿಂದ ಅರಳಿದ ಕಣ್ಣುಗಳಲ್ಲಿ ಡಿ) ಅಮಾನವೀಯತೆ ತುಂಬಿದ ಕಣ್ಣುಗಳಲ್ಲಿ**

**೧೪. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು ?**
**ಎ) .ಕಲುಷಿತವಾದ ನದೀಜಲಗಳಿಗೆ ಬಿ) ಕಲುಷಿತವಾದ ಭೂಮಿಗೆ ಸಿ) . ನೀರಿಲ್ಲದೆ ಒಣಗಿದ ಗದ್ದೆ ಬಯಲುಗಳಿಗೆ ಡಿ) ಎಲೆ ಉದುರಿ ಬೋಳಾದ ಗಿಡ ಮರಗಳಿಗೆ**

**೧೫ . ಹಕ್ಕಿಯು ಕುಕ್ಕಿರುವುದು**
**ಎ) ಹಣ್ಣುಗಳನ್ನು ಬಿ) ಸಾರ್ವಭೌಮರ ನೆತ್ತಿಯನ್ನು ಸಿ) ಪ್ರಾಣಿಗಳನ್ನು ಡಿ) ಹೂವುಗಳನ್ನು**

**೧೬ .ಹಕ್ಕಿಯ ಗರಿಯಲ್ಲಿ ಇರುವ ಬಣ್ಣಗಳು**
**ಎ) ಕರಿ ಬಿಳಿ ಬಿ) ಕೆಂಪು ನೀಲಿ ಸಿ) ಬಿಳಿ ಹೊಳೆ ಡಿ) ಹಸುರು ಕೆಂಪು**

**೧೭ . ಯಾವುದು ಹೋದರೆ ಮರಳಿ ಬಾರದು ಎಂದು ಹಲಗಲಿ ಬೇಡರು ಯೋಚಿಸುತ್ತಾರೆ ?**
**ಎ) ಆಯುಧ ಬಿ) ಹಣ ಸಿ )ಭೂಮಿ ಡಿ) ಬಂಗಾರ**

**೧೮.ಅಗಸಿಗೆ ಬಂದು ಹಲಗಲಿ ಬೇಡರಿಗೆ ಬುದ್ಧಿಮಾತು ಹೇಳಿದವರು —-**
**ಎ) ಚಟೆಕಾರ ಬಿ)ಹೆಬಲಕ ಸಾಬ ಸಿ) ಸಿಪಾಯಿಗಳು ಡಿ) ಕಾರಕೂನ**

**೧೯.ಕುಮಾರವ್ಯಾಸನಿಗಿದ್ದ ಬಿರುದು**
**ಎ)ಕರ್ಣಾಟಕವಿ ಚೂತವನ ಚೈತ್ರ . ಬಿ)ಕವಿ ಚಕ್ರವರ್ತಿ ಸಿ) ಉಪಮಾಲೋಲ ಡಿ)ರೂಪಕ ಸಾಮ್ರಾಜ್ಯ ಚಕ್ರವರ್ತಿ**

**೨೦. ಕರ್ಣನು ಯಾರನ್ನು ತನ್ನ ದಾತಾರ ಎಂದು ಕರೆದಿದ್ದಾನೆ ?**
**ಎ) ಧರ್ಮರಾಯ. ಬಿ) ದುರ್ಯೋಧನ. ಸಿ) ಕರ್ಣ. ಡಿ) ಅರ್ಜುನ**

**೨೧.ಕುವೆಂಪುರವರಿಗೆ ಹುಲ್ಲಿನ ಹಾಸುಹೇಗೆ ಕಂಡಿದೆ ?**
**ಎ) ಗಿಳಿಯ ಹಸುರು ಬಣ್ಣದಂತೆ ಬಿ) ಬೆಟ್ಟದ ಹಸುರಿನಂತೆ ಸಿ) ಮಕಮಲ್ಲಿನ ಪೊಸ ಪಚ್ಚೆಯ ಜಮಖಾನೆಯಂತೆ ಡಿ) ಆಕಾಶದ ನೀಲಿಯಂತೆ**

**೨೨. ಯಾವುದರ ಕೊರಲಿಂಪು ಕೂಡ ಹಸುರಾಗಿದೆ ?**
**ಎ) ಪ್ರಾಣಿಗಳ ಬಿ) ಮಕ್ಕಳ ಸಿ ) ಹಕ್ಕಿಯ ಡಿ) ತಾಯಂದಿರ**

**೨೩.ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ ?**
**ಎ) ಭೀಮಾರ್ಜುನರನ್ನು. ಬಿ)ನಕುಲ ಸಹದೇವರನ್ನು. ಸಿ) ಕೃಷ್ಣ ಬಲರಾಮರನ್ನು**
**ಡಿ) ಧರ್ಮರಾಯ ,ಕೃಷ್ಣರನ್ನು**

**೨೪ .ದಿನಪಸುತ ಎಂದರೆ ——**
**ಎ)ಅರ್ಜುನ ಬಿ) ನಕುಲ ಸಿ)ಕರ್ಣ. ಡಿ) ಧರ್ಮರಾಯ**

**೨೫.ಲವನು ಯಾರ ಆಶ್ರಮದಲ್ಲಿದ್ದನು ?**
**ಎ) ವಸಿಷ್ಠ ಮಹರ್ಷಿ. ಬಿ) ವಾಲ್ಮೀಕಿ ಮಹರ್ಷಿ ಸಿ) ಅಗಸ್ತ್ಯ ಋಷಿ. ಡಿ) ಗೌತಮ ಋಷಿ**

**೨೬ . ಲವನು ಕುದುರೆಯನ್ನು ಕಟ್ಟಿದನೆಂದು ಭಯಪಟ್ಟವರು ——**
**ಎ) ಸೀತಾದೇವಿ ಬಿ) ಮುನಿಗಳು ಸಿ) ಮುನಿಸುತರು ಡಿ) ವಾಲ್ಮೀಕಿ ಮಹರ್ಷಿಗಳು**

**೨೭ . ಈ ಹಸಿವನ್ನು ನೀಗಿಸುವುದು ವಿವೇಕಾನಂದರ ಮೊದಲ ಆದ್ಯತೆಯಾಗಿತ್ತು —**
**ಎ)ಆತ್ಮದ ಹಸಿವು ಬಿ) ಸಾಂಸ್ಥಿಕ ವಾದ ಧರ್ಮದ ಹಸಿವು ಸಿ) . ವೇದಾಂತದ ಹಸಿವು ಡಿ) ದೈಹಿಕ ಹಸಿವು**

**೨೮. ಪುಟ್ಟಪೋರಿಯು —-**
**ಎ) ಪುಸ್ತಕ ಓದುತ್ತಿದ್ದಾಳೆ ಬಿ) ಮುಸುರೆ ತಿಕ್ಕುತ್ತಿದ್ದಾಳೆ ಸಿ) ಸಂಗೀತ ಆಲಿಸುತ್ತಿದ್ದಾಳೆ ಡಿ) ನೃತ್ಯ ಮಾಡುತ್ತಿದ್ದಾಳೆ**

**೨೯.ಜಲಿಯನ್ ವಾಲಾಬಾಗ್ ಹತ್ಯಾಕಾಂಡಕ್ಕೆ ಕಾರಣನಾದ ಬ್ರಿಟಿಷ್ ಅಧಿಕಾರಿ——**
**ಎ) ಜನರಲ್ ಡಯರ್ ಬಿ)ಲಾರ್ಡ್ ವೆಲ್ಲೆಸ್ಲಿ ಸಿ)ವಾರನ್ ಹೇಸ್ಟಿಂಗ್ಸ್ ಡಿ) ಹೆಬಲಕ್**

**೩೦. ನೀರಲ್ಲಿ ಹುಟ್ಟೋದು ನೀರಲ್ಲಿ ಬೆಳೆಯೋದು ನೀರು ತಾಕಿದರೆ ಮಟ ಮಾಯ**
**ಎ) ಭತ್ತ ಬಿ) ಉಪ್ಪು . ಸಿ) ತಾವರೆ ಡಿ) ಬೂದಿ**

**೩೧ . ಕನ್ನಡ ವರ್ಣಮಾಲೆಯಲ್ಲಿರುವ ಅಲ್ಪಪ್ರಾಣ ಅಕ್ಷರಗಳ ಸಂಖ್ಯೆ ——**
**ಎ) ೯. ಬಿ)೧೩. ಸಿ) ೫. ಡಿ)೧೦**

**೩೨ . ಈ ಕೆಳಗಿನವುಗಳಲ್ಲಿ ಜೋಡುನುಡಿಗೆ ಉದಾಹರಣೆಯಾದ ಪದ ——**
**ಎ) . ನಟ್ಟ ನಡುವೆ ಬಿ) ಥಳ ಥಳ ಸಿ) ಸತಿಪತಿ ಡಿ) ಗಾಳಿಗೋಪುರ**

**೩೩. ಸುರಾಸುರ ಪದವು ಈ ಸಂಧಿಗೆ ಉದಾಹರಣೆಯಾಗಿದೆ ——**
**ಎ) ಆದೇಶ ಸಂಧಿ. ಬಿ)ಸವರ್ಣದೀರ್ಘ ಸಂಧಿ ಸಿ) ಆಗಮ ಸಂಧಿ. ಡಿ)ಯಣ್ ಸಂಧಿ**

**೩೪. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು**
**ಎ) ಸಾಮಾನ್ಯ ವಾಕ್ಯ ಬಿ)ಮಿಶ್ರ ವಾಕ್ಯ ಸಿ) ಸಂಯೋಜಿತ ವಾಕ್ಯ ಡಿ) ನಿಷೇಧಾರ್ಥಕ ವಾಕ್ಯ**

**೩೫. ರಾಮಲಕ್ಷ್ಮಣರು ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ ——**
**ಎ) ದ್ವಿಗು. ಬಿ)ತತ್ಪುರುಷ. ಸಿ) ಕರ್ಮಧಾರಯ. ಡಿ) ದ್ವಂದ್ವ.**

**೩೬. ಹೇಳಲಿ ಎನ್ನುವ ಪದವು ಈ ಮಾದರಿಯ ಕ್ರಿಯಾರೂಪಕ್ಕೆ ಉದಾಹರಣೆಯಾಗಿದೆ —-**
**ಎ) ವಿಧ್ಯರ್ಥಕ ಬಿ)ಸಂಭಾವನಾರ್ಥಕ ಸಿ) ನಿಷೇಧಾರ್ಥಕ. ಡಿ) ಅವಧಾರಣಾರ್ಥಕ**

**೩೭.ಹೀಂಗ ಪದದ ಗ್ರಾಂಥಿಕ ರೂಪ ——-**
**ಎ) ಹೇಗೆ . ಬಿ) ಹೀಗೆ ಸಿ) ಹೀಂಗೆ . ಡಿ) ಹಾಗೆ**

**೩೮. ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ ಇಲ್ಲಿರುವ ನೀಚರಿಗೆ ಮಾಡಿದ ಉಪಕಾರವು —**
**ಎ) ಉಪಮೇಯ . ಬಿ) ಸಮಾನಧರ್ಮ ಸಿ)ಉಪಮಾನ ಡಿ) ಉಪಮಾವಾಚಕ .**

**೩೯. ಇವುಗಳಲ್ಲಿ ಸಹನೆಯ ಮಹತ್ವ ತಿಳಿಸುವ ಗಾದೆ**
**ಎ) ತಾಳಿದವನು ಬಾಳಿಯಾನು. ಬಿ) ಕಷ್ಟ ಪಟ್ಟರೆ ಫಲವುಂಟು ಸಿ) ಕೈ ಕೆಸರಾದರೆ ಬಾಯಿ ಮೊಸರು. ಡಿ) ಕುಬಾರನಿಗೆ ವರುಷ;ದೊಣ್ಣೆಗೆ ನಿಮಿಷ**

**೪೦ . ತಂದೆಯವರಿಗೆ ಪತ್ರ ಬರೆಯುವಾಗ ಬಳಸುವ ಸಂಬೋಧನೆ —— —**
**ಎ)ಪೂಜ್ಯ ತಂದೆಯವರಿಗೆ . ಬಿ)ಪ್ರೀತಿಯ ತಂದೆಯವರಿಗೆ ಸಿ) ತೀರ್ಥರೂಪುರವರಿಗೆ ಡಿ) ಗೌರವ ಸಮಾನರಾದ**